# ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು
## ಸ್ಥಾಯಿ ಸಮಿತಿ ಸದಸ್ಯರ ಸಭೆಯ ನಡಾವಳಿ.

ದಿನಾಂಕ 9/03/2020 ರಂದು ಬೆಂಗಳೂರಿನ ಕನ್ನಡಭವನದ ಅಂತರಂಗದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಸ್ಥಾಯಿಸಮಿತಿ ಸದಸ್ಯರ ಸಭೆಯ ನಡಾವಳಿ.

ಉಪಸ್ಥಿತರು : ಸರ್ವಶ್ರೀ / ಶ್ರೀಮತಿ

| | | |
|---|---|---|
| 1. | ಪ್ರೊ: ಭೀಮಸೇನ.ಆರ್. | ಅಧ್ಯಕ್ಷರು |
| 2. | ಎಂ.ಎಸ್.ಗುಣಶೀಲನ್ | ಸದಸ್ಯರು |
| 3. | ಕೆ.ಆರ್.ಪ್ರಕಾಶ್ | ಸದಸ್ಯರು |
| 4. | ಹೆಚ್.ಎಂ.ನಾಗರಾಜರಾವ್ | ಸದಸ್ಯರು |
| 5. | ಯಶವಂತ ಸರದೇಶಪಾಂಡೆ | ಸದಸ್ಯರು |
| 6. | ಡಾ.ಶೈಲಜಾ ಎ.ಸಿ | ರಿಜಿಸ್ಟ್ರಾರ್,ಕ.ನಾ.ಅ |

ಅನುಪಸ್ಥಿತರು :

| | | |
|---|---|---|
| 1. | ಶ್ರೀ ಕಲ್ಲೇಶ್ | ಅರ್ಥ ಸದಸ್ಯರು |

----

ಹಾಜರಿದ್ದ, ಎಲ್ಲಾ ಸದಸ್ಯರನ್ನು ಅಕಾಡೆಮಿ ರಿಜಿಸ್ಟ್ರಾರ್, ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ.ಭೀಮಸೇನ್.ಆರ್ ಅವರು ವಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೋರಿದರು.

ನಾಗಪುರ ನಾಟಕೋತ್ಸವ

ಹೊರರಾಜ್ಯ ನಾಟಕೋತ್ಸವದ ಶೀರ್ಷಿಕೆಯಡಿಯಲ್ಲಿ ಶ್ರೀ ಯಶವಂತ ಸರದೇಶಪಾಂಡೆ ಅವರ ಸಂಚಾಲಕತ್ವದಲ್ಲಿ ನಾಗಪುರದ ಕನ್ನಡಸಂಘದ ಸಹಯೋಗದಲ್ಲಿ ಮಾರ್ಚ್ ತಿಂಗಳ 26, 27 ಮತ್ತು 28ರಂದು ಈ ಕಾರ್ಯಕ್ರಮ ಮಾಡಲು ಅಥವಾ ಈ ದಿನಾಂಕದಲ್ಲಿ ಕಾರ್ಯಕ್ರಮ ಮಾಡಲು ಸಾಧ್ಯವಾಗದಿದ್ದಲ್ಲಿ ಜೂನ್ 2020ರಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ತೀರ್ಮಾನಿಸಿ, ಅಕಾಡೆಮಿಯಿಂದ ಅಧ್ಯಕ್ಷರು, ಇಬ್ಬರು ಸಿಬ್ಬಂದಿ, ಆಸಕ್ತ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ತಿಳಿಸಿ ಹಾಗೂ ಮುಂದಿನ ಕ್ರಿಯಾಯೋಜನೆಯಲ್ಲಿ ಈ ಕಾರ್ಯಕ್ರಮಕ್ಕೆ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲು ಸಭೆ ತೀರ್ಮಾನಿಸಿತು.

ನಾಟಕೋತ್ಸವಕ್ಕೆ ನಿಗದಿಪಡಿಸಿರುವ ಮೊತ್ತ ರೂ.3ಲಕ್ಷ

ನಾಟಕಗಳ ವಿವರ

ಮೂರು ತಂಡಗಳಿಗೆ ಪ್ರಯಾಣ ವೆಚ್ಚ ಮತ್ತು ಸಂಭಾವನೆ ಸೇರಿದಂತೆ ತಲಾ ರೂ.60,000/-

| ಕ್ರ.ಸಂ | ತಂಡದ ಹೆಸರು | ನಾಟಕದ ಹೆಸರು | ರಚನೆ |
|---|---|---|---|
| 1 | ನಾಟ್ಯ ಕಲಾಸಿರಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು | ಸಿನಿ ಮಹಾತ್ಮೆ | ಎಚ್.ಡುಂಡಿರಾಜ್ |
| 2 | ಸುನಿಧಿ ಕಲಾಸೌರಭ,ಹುಬ್ಬಳ್ಳಿ | ಅನಾಥರ ಮಾಯಿ | ಸುಭಾಸ್ ನರೇಂದ್ರ |
| 3 | ಸಹ್ಯಾದ್ರಿ ರಂಗತರಂಗ, ಶಿವಮೊಗ್ಗ | ಸಂಕ್ರಾಂತಿ | ಪಿ.ಲಂಕೇಶ |

ಸದಸ್ಯರು, ಅಧ್ಯಕ್ಷರು, ಸಿಬ್ಬಂದಿಯ ಪ್ರಯಾಣವೆಚ್ಚ, ಆಹ್ವಾನಪತ್ರಿಕೆ, ಬ್ಯಾನರ್, ನೆನಪಿನ ಕಾಣಿಕೆ ಅಕಾಡೆಮಿಯಿಂದ ವ್ಯವಸ್ಥೆ ಮಾಡುವಂತೆ ತೀರ್ಮಾನಿಸಲಾಯಿತು. ಕಲಾವಿದರ ಊಟ, ವಸತಿ, ಸ್ಥಳೀಯ ಆತಿಥ್ಯ, ವೇದಿಕೆ ವೆಚ್ಚ , ಕನ್ನಡ ಸಂಘದವರು ಭರಿಸಲು ಒಪ್ಪಿರುವ ಬಗ್ಗೆ ಸಂಚಾಲಕರಾದ ಶ್ರೀ ಯಶವಂತ ಸರದೇಶಪಾಂಡೆಯವರು ಸಭೆಯ ಗಮನಕ್ಕೆ ತಂದರು.

**2. ವಿಶ್ವರಂಗಭೂಮಿ ದಿನಾಚರಣೆ**

2020 ಮಾರ್ಚ್ 27 ಒಂದು ನಡೆಯುವ ವಿಶ್ವರಂಗಭೂಮಿ ದಿನಾಚರಣೆಗೆ ಎಲ್ಲಾ ಜಿಲ್ಲೆಗಳಿಂದಲೂ ಬಂದಿರುವ ಮನವಿಯನ್ನು ಪರಿಶೀಲಿಸಿದ ಸಭೆಯು ಆಯಾ ಜಿಲ್ಲೆಯ ಜವಾಬ್ದಾರಿ ವಹಿಸಿಕೊಂಡಿರುವ ಸದಸ್ಯರು ಒಪ್ಪಿಗೆ ಸೂಚಿಸಿದ ಸಂಸ್ಥೆಗಳಿಗೆ ಅಕಾಡೆಮಿಯ ಸಹಯೋಗದಲ್ಲಿ ವಿಶ್ವದಿನಾಚರಣೆ ಆಚರಿಸಲು ಮತ್ತು ತಲಾ ರೂ.20,000/- ನೀಡಲು ಸಭೆ ಅನುಮತಿಸಿತು.

| ಕ್ರ.ಸಂ | ಸಂಸ್ಥೆಯ ಹೆಸರು | ಜಿಲ್ಲೆ | ಸದಸ್ಯರ ಹೆಸರು |
|---|---|---|---|
| 1. | ವಿಶ್ವರಂಗ ನಾಟಕ ಮತ್ತು ನೃತ್ಯ ಸೇವಾ ಸಂಘ(ರಿ)ಕಲಬುರಗಿ | ಕಲಬುರಗಿ | ಪ್ರವೀಣ ಗಜಾನನ ರಾಥೋಡ್ |
| 2. | ರಾಗಸಂಗಮ ಕಲಾಮಂಡಳ(ರಿ)ರಾಯಚೂರು | ರಾಯಚೂರು | ಪ್ರಭುದೇವ ಕಪ್ಪಗಲ್ |
| 3. | ಸಗರನಾಡು ಸೇವಾ ಪ್ರತಿಷ್ಠಾನ(ರಿ) ಯಾದಗಿರಿ | ಯಾದಗಿರಿ | ಪ್ರಭುದೇವ ಕಪ್ಪಗಲ್ |
| 4. | ಐಶ್ವರ್ಯ ಕಲಾನಿಕೇತನ(ರಿ)ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | ಪ್ರಭುದೇವ ಕಪ್ಪಗಲ್ |
| 5. | ವಿಶ್ವಮಾನವ ಎಜುಕೇಷನ್ ಸೊಸೈಟಿ(ರಿ)ಚಿಕ್ಕಮಗಳೂರು | ಚಿಕ್ಕಮಗಳೂರು | ನಾಗರಾಜ್ ರಾವ್ |
| 6. | ರಂಗಸೌಗಂಧ(ರಿ) ಸಿದ್ದಾಪುರ (ಉ.ಕ ) | ಉತ್ತರ ಕನ್ನಡ | ಕೆ.ಆರ್.ಪ್ರಕಾಶ್ |
| 7. | ಕನ್ನಡ ಕಲಾಸಂಘ, ತುಂಗಭದ್ರಾ ಆಣೆಕಟ್ಟು, ಹೊಸಪೇಟೆ, ಬಳ್ಳಾರಿ ಜಿಲ್ಲೆ | ಬಳ್ಳಾರಿ | ರಾಜಾರಾವ್.ಟಿ |
| 8. | ಶ್ರೀ ಶಿವಶಾಂತವೀರ ಶಿಕ್ಷಣ ಗ್ರಾಮೀಣಾಭಿವೃದ್ಧಿ ಸಾಂಸ್ಕೃತಿಕ ಕಲಾಸಂಸ್ಥೆ(ರಿ) ಕವಲೂರು, ಕೊಪ್ಪಳ | ಕೊಪ್ಪಳ | ರಾಜಾರಾವ್ |
| 9. | ರಂಗಭೂಮಿ(ರಿ)ಉಡುಪಿ | ಉಡುಪಿ | ಎಂ.ಕೆ.ಮಠ |
| 10. | ಸ್ನೇಹಿತರು ಕಲಾಸಂಘ(ರಿ)ಮಾಳಮಡ್ಡಿ, ಧಾರವಾಡ | ಧಾರವಾಡ | ಶಿವಪ್ಪ |
| 11. | ರಂಗವಾಹಿನಿ(ರಿ) ಚಾಮರಾಜನಗರ | ಚಾಮರಾಜನಗರ | ರಾಧಾಕೊಡಗು |
| 12. | ರಂಗಸಂಪದ(ರಿ)ಬೆಳಗಾವಿ | ಬೆಳಗಾವಿ | ವಿನೋದ |
| 13. | ರಂಗವಿಜಯಾ, ಕೋಲಾರ | ಕೋಲಾರ | ಗುಣಶೀಲನ್ |
| 14. | ಅಮರನಾಥ್ ಯೋಗಕೇಂದ್ರ, ದೊಡ್ಡಬಳ್ಳಾಪುರ | ಬೆಂ.ಗ್ರಾಮಾಂತರ | ಗುಣಶೀಲನ್ |
| 15. | ದೇಸಿರಂಗ ಸಾಂಸ್ಕೃತಿಕ ಸಂಸ್ಥೆ(ರಿ)ಮೈಸೂರು | ಮೈಸೂರು | ರಾಧಾ ಕೊಡಗು |
| 16. | ಚರಿತ್ರ ಫೌಂಡೇಶನ್(ರಿ)ರಾಮನಗರ | ರಾಮನಗರ | ಜೋಸೆಫ್ |
| 17. | ಸಮೂಹ ಹೆಜ್ಜೆ ಸಾಂಸ್ಕೃತಿಕ ಟ್ರಸ್ಟ್ | ಮಂಡ್ಯ | ಜೋಸೆಫ್ |
| 18. | ಅಂತರಂಗ ಟ್ರಸ್ಟ್(ರಿ) ಸಾಗರ | ಶಿವಮೊಗ್ಗ | ಕೆ.ಆರ್.ಪ್ರಕಾಶ್ |
| 19. | ಆತ್ಮೀಯ ರಂಗಪ್ರಯೋಗಾಲಯ ಟ್ರಸ್ಟ್, ಚಾಮರಾಜನಗರ | ಚಾಮರಾಜನಗರ | ರಾಧಾ ಕೊಡಗು |
| 20. | ವರಸಿದ್ಧಿ ವಿನಾಯಕ ಯುವಕಲಾಸಂಘ(ರಿ), ಹಾವೇರಿ | ಹಾವೇರಿ | ಶಿವಪ್ಪ |
| 21. | ಶ್ರೀ ಚನ್ನಕೇಶವಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ(ರಿ), ಹಾಸನ ಜಿಲ್ಲೆ | ಹಾಸನ | ನಾಗರಾಜಾರಾವ್ |
| 22. | ಚಿನ್ಮಯ ಸಾಂಸ್ಕೃತಿಕ ಅಕಾಡೆಮಿ(ರಿ)ಗದಗ | ಗದಗ | ಯಶವಂತ ಸರದೇಶಪಾಂಡೆ |
| 23. | ರಂಗಮೇಳ ಕಲಾಸಂಸ್ಥೆ(ರಿ) | ವಿಜಯಪುರ | ಯಶವಂತ ಸರದೇಶಪಾಂಡೆ |
| 24. | ಕರಾವಳಿ ಕರ್ನಾಟಕ ರಂಗ ಕಲಾವಿದರ ಸೇವಾಪರಿಷತ್ (ರಿ), ದಕ್ಷಿಣಕನ್ನಡ, ಉಡುಪಿ, ಕಾಸರಗೋಡು | ಮಂಗಳೂರು | ಎಂ.ಕೆ.ಮಠ |
| 25. | ಗಾಯಿತ್ರಿ ಚಾರಿಟಬಲ್ ಟ್ರಸ್ಟ್(ರಿ), ಮಡಿಕೇರಿ | ಮಡಿಕೇರಿ | ರಾಧಾ ಕೊಡಗು |
| 26. | ವಾಸುದೇವ ವಿನೋದಿನಿ ನಾಟ್ಯ ಸಭಾ(ರಿ)ಬಾಗಲಕೋಟೆ | ಬಾಗಲಕೋಟೆ | ವಿನೋದ್ ಅಂಬೇಕರ್ |
| 27. | ಭೂಮಿಕಾ - ವನಿತಾ ರಂಗವೇದಿಕೆ, ದಾವಣಗೆರೆ | ದಾವಣಗೆರೆ | ರವೀಂದ್ರ ಅರಳಗುಪ್ಪಿ |
| 28. | ಜೈ ಭವಾನಿ | ಬೀದರ್ | ವೈಜನಾಥ ಬಿರಾದಾರ |
| 29. | ರಂಗಸೌರಭ ಕಲಾಸಂಘ(ರಿ) | ಚಿತ್ರದುರ್ಗ | ಟಿ.ಎಸ್.ಸದಾಶಿವಯ್ಯ |
| 30. | ಗುಬ್ಬಿ ಶ್ರೀ ಚನ್ನಬಸವೇಶ್ವರ,ತುಮಕೂರು | ತುಮಕೂರು | ಟಿ.ಎಸ್.ಸದಾಶಿವಯ್ಯ |

**ವಿಶ್ವರಂಗಭೂಮಿ ಸಂದೇಶಾನುವಾದ**

ವಿಶ್ವರಂಗಭೂಮಿ ಸಂದೇಶದ ಕನ್ನಡಾನುವಾದವನ್ನು ಶ್ರೀ ಶಶಿಧರ ಭಾರಿಘಾಟ್ ಅವರಿಂದ ಮಾಡಿಸಲು ಮತ್ತು ಅವರಿಗೆ ಗೌರವ ಸಂಭಾವನೆಯಾಗಿ ರೂ.1,000/- ನೀಡಲು ಸಭೆ ಅನುಮತಿ ನೀಡಿತು.

**ಬೆಂಗಳೂರಿನಲ್ಲಿ ವಿಶ್ವರಂಗಭೂಮಿ ದಿನಾಚರಣೆ**

ಬೆಂಗಳೂರಿನಲ್ಲಿ ನಡೆಯುವ ವಿಶ್ವರಂಗಭೂಮಿ ದಿನಾಚರಣೆಗೆ ಸಂಚಾಲಕರಾಗಿ ಸದಸ್ಯರಾದ ಶ್ರೀ ಎಂ.ಎಸ್.ಗುಣಶೀಲನ್ ಮತ್ತು ಶ್ರೀಮತಿ ಪ್ರೇಮಾ ಬಾದಾಮಿ ಅವರುಗಳು ಕಾರ್ಯನಿರ್ವಹಿಸಲು ಸಭೆ ಅನುಮತಿಸಿತು. ದಿನಾಂಕ 27-3-2020ರಂದು ನಯನ ರಂಗಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ಮನುಬಳಿಗಾರ್, ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಟಿ.ಎಸ್.ನಾಗಾಭರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ರಂಗಪ್ಪ ಅವರ ಉಪಸ್ಥಿತಿಯಲ್ಲಿ ರಂಗಸಂದೇಶ ವಾಚನ, ರಂಗಗೌರವ, ಮೂರು ತಂಡಗಳಿಂದ ರಂಗಗೀತೆ, ಮೂರು ತಂಡಗಳಿಂದ ರಂಗದೃಶ್ಯಾವಳಿಯನ್ನೊಳಗೊಂಡ ವಿಶ್ವರಂಗಭೂಮಿ ದಿನಾಚರಣೆ ಆಚರಿಸಲು ಸಭೆ ನಿರ್ಧರಿಸಿತು. ರಂಗಗೀತೆಗೆ ಸಂಭಾವನೆ ತಲಾ ರೂ.10,000/-, ರಂಗದೃಶ್ಯಾವಳಿಗೆ ತಲಾ ರೂ.20,000/- ರಂಗಗೌರವ ಪಡೆಯುವವರಿಗೆ ಪ್ರಯಾಣಭತ್ಯೆ, ದಿನಭತ್ಯೆಯಾಗಿ ತಲಾ ರೂ.1,000/- ಮತ್ತು ಅವರುಗಳಿಗೆ ಶಾಲು, ಹಾರ ನೆನಪಿನ ಕಾಣಿಕೆ, ಡ್ರೈಫ್ರೂಟ್ಸ್ ನೀಡಲು ಸಭೆ ಅನುಮತಿಸಿತು. ಈ ಕಾರ್ಯಕ್ರಮದ ಸಂಬಂಧ ಪತ್ರಿಕಾ ಪ್ರಕಟಣೆ ನೀಡಲು ಸಭೆ ನಿರ್ಧರಿಸಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

* ಮಾಸ್ಟರ್ ಹಿರಣ್ಣಯ್ಯ ದತ್ತಿ ನಿಧಿ ಸಂಬಂಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಒಂದು ಲಕ್ಷ ಹಣವನ್ನು ನಿಶ್ಚಿತ ಠೇವಣಿ ಇಟ್ಟಿದ್ದು, ಅಲ್ಲಿನ ಅಕೌಂಟ್‌ನ್ನು ರದ್ದುಗೊಳಿಸಿ, ಉಳಿದ ದತ್ತಿ ನಿಧಿಗಳು ಕೆನರಾಬ್ಯಾಂಕ್‌ನಲ್ಲಿಯೇ ಇರುವುದರಿಂದ, ಆ ಹಣವನ್ನು ಕೆನರಾ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಇಡಲು ಸಭೆ ಅನುಮತಿಸಿತು.

* ಗಿರಿಜನ ಉಪಯೋಜನೆಯಡಿ ಫೆಲೋಶಿಪ್ ಅಭ್ಯರ್ಥಿಯಾಗಿ ಶ್ರೀ ಸತೀಶ್ ನಾಯಕ್, ಬೆಳಗಾವಿ ಅವರು ಆಯ್ಕೆಯಾಗಿದ್ದು, ಇದುವರೆಗೂ ಫೆಲೋಶಿಪ್ ಅಧ್ಯಯನದ ಒಂದೂ ವರದಿಯನ್ನು ಅಕಾಡೆಮಿಗೆ ನೀಡಿರುವುದಿಲ್ಲ ಮತ್ತು ಫೆಲೋಶಿಪ್ ವರದಿಯನ್ನು ನೀಡಲು ಸಾಧ್ಯವಾಗುವುದಿಲ್ಲವೆಂದು ದೂರವಾಣಿಯಲ್ಲಿ ತಿಳಿಸಿರುವ ಹಿನ್ನಲೆಯಲ್ಲಿ ಅವರ ಆಯ್ಕೆಯನ್ನು ರದ್ದುಪಡಿಸಿ ಮತ್ತು ಅವರಿಗೆ ನೀಡಿದ್ದ ಕಾಲಾವಧಿ ಮುಗಿದಿರುವುದರಿಂದ ಅದಕ್ಕೆ ಮೀಸಲಿಟ್ಟಿದ್ದ ಒಂದು ಲಕ್ಷ ಹಣವನ್ನು ಗಿರಿಜನ ಯೋಜನೆಯಡಿ ಮಾರ್ಗದರ್ಶಕರಿಗೆ ನೀಡಲು ಉಪಯೋಗಿಸಲು ಸಭೆ ಒಪ್ಪಿಗೆ ನೀಡಿತು.

* ಗಾಂಧಿ-150 ಕಾರ್ಯಕ್ರಮದ ಸಂಬಂಧ ಪ್ರಶಸ್ತಿ ವಿಜೇತರಿಗೆ ಅಕಾಡೆಮಿಯಿಂದ ನೀಡಿದಂತಹ ಗಾಂಧೀಜಿಯ ವಿಗ್ರಹದ ಒಂದು ನೆನಪಿನ ಕಾಣಿಕೆಯನ್ನು ಇಲಾಖಾ ಸಚಿವರಿಗೆ ನೀಡಲು ಸಭೆ ಅನುಮತಿಸಿತು.

* ದಾಖಲೀಕರಣ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಮೂರು ಜನ ಸಿಬ್ಬಂದಿಯ ಸೇವಾ ಅವಧಿ 2020 ಮಾರ್ಚ್ 31 ಕ್ಕೆ ಮುಕ್ತಾಯವಾಗುತ್ತಿದ್ದು, ಅವರನ್ನು ಬಿಡುಗಡೆಗೊಳಿಸಲು ಮತ್ತು ಇದುವರೆಗೂ ಈ ಯೋಜನೆ ಸಂಬಂಧ ಆಗಿರುವ ಕೆಲಸಗಳನ್ನು ಪುನರ್ ಅವಲೋಕಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಗೆ ಬಂದ ಪತ್ರಗಳು

1. ಡಾ.ದೇವದಾಸ ಕಳಸದ,ಧಾರವಾಡ ಇವರು ರಂಗಜಂಗಮ ರಾಮಚಂದ್ರ ಹೆಗಡೆಯವರ ರಂಗಸಾಧನೆ ಪುಸ್ತಕ ಪ್ರಕಟಣೆ ಕುರಿತು ಮನವಿ ಸಲ್ಲಿಸಿರುತ್ತಾರೆ

ಮನವಿಯನ್ನು ಪರಿಶೀಲಿಸಿದ ಸಭೆಯು ಡಾ.ದೇವದಾಸ ಕಳಸದ,ಧಾರವಾಡ ಇವರು ಬರೆದಿರುವ ರಂಗಜಂಗಮ ರಾಮಚಂದ್ರ ಹೆಗಡೆಯವರ ರಂಗಸಾಧನೆ ಪುಸ್ತಕದ ಪ್ರಕಟಣೆಯನ್ನು ಅಕಾಡೆಮಿಯಿಂದ ರಂಗಸಂಪನ್ನರು ಮಾಲಿಕೆಯಡಿ ಪ್ರಕಟಿಸುವುದಕ್ಕೆ ಸಾಧ್ಯವಿಲ್ಲವೆಂದು ಹಾಗೂ ಲೇಖಕರೆ ಸ್ವತ: ಪ್ರಕಟಣೆ ಮಾಡಲು ಕೆಳಕಂಡ ಷರತ್ತುಗಳೊಂದಿಗೆ ಅನುಮತಿ ನೀಡಿತು.

ಷರತ್ತುಗಳು:

(ಅ) ಪುಸ್ತಕದ ಪ್ರಿಲಿಮಿನರಿ ಪುಟದಲ್ಲಿ ಅಕಾಡೆಮಿಯ ಯೋಜನೆಯನ್ನು ಪ್ರಸ್ತಾಪಿಸಬೇಕು.

(ಆ) ಅಕಾಡೆಮಿಗೆ 50 ಗೌರವಪ್ರತಿಗಳನ್ನು ಸಲ್ಲಿಸಬೇಕು.

2. ರಂಗಾಯಣ, ಧಾರವಾಡ ಇವರು ರಾಷ್ಟ್ರೀಯ ನಾಟಕೋತ್ಸವ ಹಾಗೂ ವಿಚಾರಸಂಕಿರಣ ಕಾರ್ಯಕ್ರಮದಲ್ಲಿ ಅಕಾಡೆಮಿಯಿಂದ ಸಹಯೋಗ ನೀಡುವ ಕುರಿತು ಮನವಿ ಸಲ್ಲಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ರಂಗಾಯಣ,ಧಾರವಾಡವು ದಿನಾಂಕ 15-3-2020 ರಿಂದ ದಿನಾಂಕ 19-3-2020ರವರೆಗೆ ಏರ್ಪಡಿಸಿರುವ ರಾಷ್ಟ್ರೀಯ ನಾಟಕೋತ್ಸವದಲ್ಲಿ ನಾಟಕ ಪ್ರದರ್ಶನ ನೀಡುವ ಎರಡು ತಂಡಗಳಿಗೆ ತಲಾ ಸಂಭಾವನೆ 35,000/-ದಂತೆ ಒಟ್ಟು ರೂ.70,000/- ನೀಡಲು ಸಭೆ ಅನುಮತಿಸಿತು.

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

18.03.2020

( ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

(ಡಾ.ಶೈಲಜಾ ಎ.ಸಿ)
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ